# ACADEMIC MASTER PLAN. 2025-26. SVAUPS Swarga

ಮುನ್ನುಡಿ:

ಕಾಸರಗೋಡು ಜಿಲ್ಲೆಯ, ಎಣ್ಮಕಜೆ ಪಂಚಾಯತು ವ್ಯಾಪ್ತಿಯ, ಪಡ್ರೆ ಗ್ರಾಮದ ಪ್ರಕೃತಿ ರಮಣೀಯ ಪರಿಸರದಲ್ಲಿ ನೆಲೆನಿಂತ ಶಾಲೆ ನಮ್ಮ ಸ್ವಾಮಿ ವಿವೇಕಾನಂದ ಎ.ಯು.ಪಿ. ಶಾಲೆ. ಸ್ವರ್ಗ. ಕ್ರಿ.ಶ 1928 ರಲ್ಲಿ ದಿ| ವಾಲ್ತಾಜೆ ಹೃಷೀಕೇಶ ಭಟ್ಟರಿಂದ 'ವಿದ್ಯಾ ತೋಟದ ಬಯಲು ಶಾಲೆ' ಎಂಬ ನಾಮಧೇಯದೊಂದಿಗೆ ಆರಂಭಗೊಂಡು ಕ್ರಿ.ಶ. 1971 ರಲ್ಲಿ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯಾಗಿ ಪುನರ್ನಾಮ-ಕರಣಗೊಂಡಿತು. ಶಾಲಾ ಆವರಣವು ಸುಮಾರು ಒಂದೂವರೆ ಎಕರೆಗಳಷ್ಟಿದ್ದು ತೆಂಗು, ಮಾವು, ಹಲಸು ಹಾಗೂ ಇತರ ಮರಗಳಿಂದ ಹಸಿರು ಹಸಿರಾಗಿದ್ದು ಸ್ವಚ್ಛ, ಸುಂದರ ಪರಿಸರ ನಮ್ಮದಾಗಿದೆ. ಪ್ರಸ್ತುತ ಶ್ರೀ ಹೃಷೀಕೇಶ ವಿ. ಎಸ್ ರವರು ವ್ಯವಸ್ಥಾಪಕರಾಗಿ ಶಾಲೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸುತ್ತಿದ್ದಾರೆ.

2025-26 ನೇ ಶೈಕ್ಷಣಿಕ ವರ್ಷದಲ್ಲಿ I ರಿಂದ VII ನೇ ತರಗತಿಯ ವರೆಗೆ ಒಟ್ಟು 164 ಮಕ್ಕಳು ವ್ಯಾಸಂಗ ಮಾಡುತ್ತಿದ್ದು 9+1 ಅಧ್ಯಾಪಕ ಸಿಬ್ಬಂದಿಗಳಲ್ಲದೆ ಜೊತೆ ಮಲಯಾಳ ಭಾಷಾ ಶಿಕ್ಷಕಿಯು ಸೇವೆಗೈಯ್ಯುತ್ತಿದ್ದಾರೆ. 2003-04 ರಲ್ಲಿ ಶಾಲೆಯು 'ಅಮೃತ ಮಹೋತ್ಸವ'ವನ್ನು ವಿಜೃಂಭಣೆಯಿಂದ ಆಚರಿಸಿದ್ದು ಈ ಸಂದರ್ಭದಲ್ಲಿ 8 ಕೋಣೆಗಳ ನೂತನ ಕಟ್ಟಡ ನಿರ್ಮಾಣಗೊಂಡಿದೆ. ಮಕ್ಕಳ ಕಲಿಕೆಗೆ ಪೂರಕವಾದ ಆಟದ ಬಯಲು, ಮಕ್ಕಳ ಪಾರ್ಕ್, ತರಕಾರಿ ತೋಟ, ಕಂಪ್ಯೂಟರ್ ಲ್ಯಾಬ್, ವಿಜ್ಞಾನ ಲ್ಯಾಬ್, ವಾಚನಾಲಯ, ಗ್ರಂಥಾಲಯಗಳನ್ನು ಹೊಂದಿದೆ. ಗ್ರಾಮೀಣ ಪ್ರದೇಶದ ಗಡಿನಾಡ ಶಾಲೆಯಲ್ಲಿ ಬಹುತೇಕ ಮಕ್ಕಳು ಪರಿಶಿಷ್ಟ ಜಾತಿ/ ಪಂಗಡದವರಾಗಿರುತ್ತಾರೆ. ಹೆತ್ತವರ, ಶಿಕ್ಷಕರ ಮತ್ತು ಮಕ್ಕಳ ನಿರಂತರ ಪ್ರಯತ್ನದಿಂದ ಜಿಲ್ಲೆ / ಉಪಜಿಲ್ಲೆಗಳಲ್ಲಿ ತಮ್ಮದೇ ಸ್ಥಾನವನ್ನು ಕಾಯ್ದು-ಕೊಂಡಿದೆ. ಸರಕಾರದಿಂದ ಕೊಡಮಾಡುವ ಮಧ್ಯಾಹ್ನದೂಟವನ್ನು ರುಚಿ-ರುಚಿಯಾಗಿ ನೀಡುವುದರ ಜೊತೆಗೆ 'ಪ್ರಭಾತ ಭಕ್ಷ್ಯ' ವ್ಯವಸ್ಥೆಯನ್ನು ಹಲವಾರು ವರ್ಷಗಳಿಂದ ಮಾಡುತ್ತಿದ್ದೇವೆ. ಶಾಲೆಗೆ ಬರುವ ಮಕ್ಕಳ ಸೌಕರ್ಯಕ್ಕಾಗಿ 'School Bus' ಹಾಗೂ 2 ಮಾರುತಿ ಓಮ್ನಿಗಳ ವ್ಯವಸ್ಥೆಯನ್ನು ಹೊಂದಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನೇ ಧ್ಯೇಯವಾಗಿಸಿ ಈ ವರ್ಷ ಹಮ್ಮಿಕೊಳ್ಳಲು ಉದ್ದೇಶಿಸಿದ ಯೋಜನೆಯು ಈ ರೀತಿಯಾಗಿದೆ -

| SL No | Name of Activity | Objectives | Time | Charge | Finance. |
|---|---|---|---|---|---|
| 1. | ಆಟದ ಪಾರ್ಕ್ ದುರಸ್ತಿ. | → ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಂರಕ್ಷಿಸುವುದು<br>→ ಶಾಲೆಯ ಆಕರ್ಷಣೆಗಾಗಿ ಅಂದಗೊಳಿಸುವುದು. | August to December. | PTA | 5,00,000/- |
| 2. | Open classroom | • ಪ್ರಕೃತಿ, ಪರಿಸರವನ್ನು ವೀಕ್ಷಿಸುವ<br>• ವಿಶಾಲ ಮನೋಭಾವನೆ ಬೆಳೆಸುವುದು.<br>ಕಲಿಕೆಯಲ್ಲಿ ಆಸಕ್ತಿ ಮೂಡಿಸಲು. | August to December | PTA | 2,00,000/- |
| 3. | Games ತರಬೇತಿ. | • ಸ್ಪರ್ಧಾತ್ಮಕ ಮನೋಭಾವ<br>• ನಾಯಕತ್ವ.<br>• ದೈಹಿಕ ಮಾನಸಿಕ ಆರೋಗ್ಯ<br>• ಸಂತೋಷ | September, October | PTA | 2000/- |
| 4. | ಪ್ಲಾಸ್ಟಿಕ್ ಮುಕ್ತ ಆವರಣ. | • ಪರಿಸರ ಸಂರಕ್ಷಣೆ<br>• ಉತ್ತಮ ಆರೋಗ್ಯ. | June to March | PTA | 2000/- |
| 5. | ಬಾಲೋದ್ಯಾನ ಭಿತ್ತಿಪತ್ರ. | • ಸಾಹಿತ್ಯದಲ್ಲಿ ಆಸಕ್ತಿ ಬೆಳೆಸುವುದು.<br>• ಬರವಣಿಗೆ ಹವ್ಯಾಸವನ್ನು ಬೆಳೆಸುವುದು. | June to March | PTA | 2000/- |
| 6. | ಆಚರಣೆಗಳು. | • ದೇಶಭಕ್ತಿ ಭಾವನೆ<br>• ಉತ್ತಮ ಸಂಸ್ಕಾರ | June to March | PTA | 5000/- |
| 7. | ಕಾವ್ಯೋತ್ಸವ. | ಸೃಜನಾತ್ಮಕತೆಗೆ ಪ್ರೋತ್ಸಾಹ. | September | PTA | 500/- |
| 8. | Digital ಕಥೆ | ಅಭಿನಯ ಮಾತುಗಾರಿಕೆಗೆ ಪ್ರೋತ್ಸಾಹ. | September & October | PTA | 500/- |
| 9. | Englis Assembly | ಇಂಗ್ಲೀಷ್ ಭಾಷೆಯನ್ನು ಸರಾಗವಾಗಿ ಮಾತನಾಡಲು | October | Subject Teacher | – |
| 10. | ವಿಜ್ಞಾನ ವಿಸ್ಮಯ ಗೋಡೆ. | ಕೌತುಕ ವಿಷಯಗಳನ್ನು ಓದಿ ತಿಳಿಯಲು | September | Sub Teacher | 500/- |

| | | | | | |
|---|---|---|---|---|---|
| 11. | ಪ್ರಕೃತಿ ದುರಂತ ಪರಿಹಾರ Demonstration | ಸ್ವ ಅನುಭವದ ಮೂಲಕ ದುರಂತ ನಿವಾರಣಾ ಕಾರ್ಯಗಳನ್ನು ಅರಿತುಕೊಳ್ಳುವುದು. | February | Teacher | 2000/- |
| 12. | ಮಧುರ ಕನ್ನಡ. | ಗುಣಾತ್ಮಕ ವಿದ್ಯಾಭ್ಯಾಸ ಪ್ರತಿ ಮಗುವಿಗೂ ಓದು/ಬರಹ. | June to March | Class Teachers | 2000/- |
| 13. | ಪ್ರತಿಭೋತ್ಸವ. ಕ್ರೀಡೋತ್ಸವ. | ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು | November January | PTA | 10,000/- |
| 13. | ಶೈಕ್ಷಣಿಕ ಪ್ರವಾಸ. | ಜ್ಞಾನ ಸಂಪಾದನೆಗೆ. ಮನರಂಜನೆಗಾಗಿ | December | PTA | Per head 1000/- |
| 14. | ಕಲೋತ್ಸವ | ತರಗತಿಯಲ್ಲಿ ಕಲಿತ ವಿಚಾರಗಳನ್ನು ಸಮಾಜದ ಮುಂದೆ ಪ್ರದರ್ಶಿಸುವುದು | March | PTA | 5000/- |

ಪ್ರತಿಯೊಂದು ಮಗುವಿನಲ್ಲೂ ಪ್ರತಿಭೆಯಿದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಶಿಕ್ಷಣ, ಅದರಂತೆ ಮಗುವಿನ ಕಡೆಗೆ ವಿಶೇಷ ಗಮನ ಹರಿಸಿ ಪ್ರಧಾನ ವ್ಯವಸ್ಥೆಗೆ ತಮ್ಮಲ್ಲಿ ರೂಪಿಸಿದ ಅನೇಕ ಯೋಜನೆಗಳಲ್ಲಿ ಕೆಲವನ್ನು ಮಾತ್ರ ಆಯ್ಕೆ ಮಾಡಿರುತ್ತೇವೆ. ಅಧ್ಯಾಪಕರು, ಮಕ್ಕಳು, ಹೆತ್ತವರು ಮತ್ತು ವಿದ್ಯಾಭಿಮಾನಿಗಳ ನಿರಂತರ ಪ್ರೋತ್ಸಾಹ, ಪ್ರೀತಿ ಸಹಭಾಗಿತ್ವದಲ್ಲಿ ಎಲ್ಲ ಯೋಜನೆಗಳು ಯಶಸ್ವಿಗಳ ಯೋಜಿತ ಕಾರ್ಯರೂಪಕ್ಕೆ ಬರುವಂತಾಗಲಿ, ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂಬ ಹಾರೈಕೆಗಳೊಂದಿಗೆ —

SWAMY VIVEKANANDA A.U.P. SCHOOL
P.O.PADRE
KASARAGOD-671552
PH: 04998-266162
★ SWARGA ★

[signature]

**B.GEETHA KUMARI**
Headmistress
S V A U P S Swarga
P.O. Padre, Kasaragod-671552